KAUK620015652025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**-: ಉಪಸ್ಥಿತರು :-**

**ಶ್ರೀ ಈರಣ್ಣ ಹುಣಶಿಕಟ್ಟಿ.,**
**ಬಿ.ಕಾಂ.,ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ., ಹೊನ್ನಾವರ.**

**ದಿನಾಂಕ 5 ನೇ ಜುಲೈ ಮಾಹೆಯ 2025 ನೇ ಇಸವಿ.**

**ಮೂಲ ದಾವಾ ಸಂಖ್ಯೆ– 63/2025.**

**ವಾದಿಯರು:–** **ಅನಸೂಯಾ ಧರ್ಮ ನಾಯ್ಕ.**
ವಯಸ್ಸು ಸುಮಾರುಃ– 71 ವರ್ಷ,
ಉದ್ಯೋಗಃ– ಮನೆವಾರ್ತೆ ,
ಸಾಕೀನಃ– ಜನತಾ ಪ್ಲಾಟ್, ಮೇಲಿನ ಮೂಡ್ಕಣಿ,
ತಾಲೂಕುಃ– ಹೊನ್ನಾವರ (ಉ.ಕ).
**(ವಾದಿಯರ ಪರವಾಗಿ ಶ್ರೀ. ವಿ.ಆರ್.ಎನ್.,ವಕೀಲರು)**

**–ವಿರುದ್ಧ–**

**ಪ್ರತಿವಾದಿಯರು:–** **ವೀಣಾ ಹನುಮಂತ ನಾಯ್ಕ ಹಾಗೂ ಇತರರು.**
ವಯಸ್ಸು ಸುಮಾರುಃ– 48 ವರ್ಷ,
ಉದ್ಯೋಗಃ– ಮನೆವಾರ್ತೆ,
ಸಾಕೀನಃ– ದೊಟ್ಟೆಮಕ್ಕಿ,
ಮೇಲಿನ ಮೂಡ್ಕಣಿ,
ತಾಲೂಕುಃ– ಹೊನ್ನಾವರ (ಉ.ಕ).
**(ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಜಿ.ಎಚ್.,ವಕೀಲರು)**

*****

**<u>ಮಧ್ಯಂತರ ಅರ್ಜಿ ಸಂಖ್ಯೆ 3 ರ ಪಕ್ಷಗಾರರು.</u>**

**<u>ಅರ್ಜಿದಾರರು</u>:-** **ಅನಸೂಯಾ ಧರ್ಮ ನಾಯ್ಕ.**

(ಅರ್ಜಿದಾರರ ಪರವಾಗಿ ಶ್ರೀ. ವಿ.ಆರ್.ಎನ್.,ವಕೀಲರು)

**-<u>ವಿರುದ್ಧ</u>-**

**<u>ಎದುರುದಾರರು</u>:-** **ವೀಣಾ ಹನುಮಂತ ನಾಯ್ಕ ಹಾಗೂ ಇತರರು.**

(ಎದುರುದಾರರ ಪರವಾಗಿ ಶ್ರೀ ಎಸ್.ಜಿ.ಎಚ್.,ವಕೀಲರು)

*****

**-: <u>ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ</u> :-**

ಪ್ರಸ್ತುತ ದಾವೆಯನ್ನು ವಾದಿಯು, ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ತದನಂತರ, ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ ನ್ನು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ, ಈ ದಾವೆಯು ನಿಖಾಲೆ ಆಗುವವರೆಗೆ ಪ್ರತಿವಾದಿ ಹಾಗೂ ಅವರ ಕಡೆಯವರು ದಾವಾ ಸ್ಥಳದಲ್ಲಿರುವ ವಾದಿಗೆ ಸಂಬಂಧಪಟ್ಟ ನಿವೇಶನವನ್ನು ದುರಸ್ಥಪಡಿಸಿಕೊಳ್ಳಲು ಅಡ್ಡಿಪಡಿಸದಂತೆ ಹಾಗೂ ವಾದಿಯ ಸುರಳಿತ ಕಬ್ಜಾ ಭೋಗ್ವಟೆಗೆ ಯಾವುದೇ ರೀತಿಯಲ್ಲಿ ಆತಂಕಪಡಿಸದಂತೆ ಪ್ರತಿವಾದಿ ಹಾಗೂ ಅವರ ಕಡೆಯವರ ವಿರುದ್ಧ ಮತ್ತು ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**-: <u>ದಾವಾ ಸ್ಥಳಗಳ ವಿವರ</u> :-**

ಕರ್ನಾಟಕ ಸರ್ಕಾರದ ಆಶ್ರಯ ಯೋಜನೆಯಡಿಯಲ್ಲಿ ದಿನಾಂಕ 19-11-1991 ರಂದು ಉತ್ತರ ಕನ್ನಡ ಜಿಲ್ಲಾ, ಹೊನ್ನಾವರ ತಾಲೂಕು, ಮಾವಿನಕುರ್ವಾ ಹೋಬಳಿ, ಮೇಲಿನ ಮೂಡ್ಕಣಿ ಗ್ರಾಮದ ಸರ್ವೆ ನಂ. 77 ರಲ್ಲಿ ರಚಿಸಿರುವ 30 x 40 ವಿಸ್ತೀರ್ಣವುಳ್ಳ

ಫ್ಲೋಟ ನಂ. 9 ಹಾಗೂ ಹೆರಂಗಡಿ ಗ್ರಾಮ ಪಂಚಾಯತದವರು ನೀಡಿದ ಮನೆ ನಂ. 81 ರ ಸ್ಥಳಗಳು ದಾವಾ ಸ್ಥಳಗಳಾಗಿರುತ್ತವೆ.

2. **ಮಧ್ಯಂತರ ಅರ್ಜಿ ಸಂಖ್ಯೆ 3 ರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ** :-

ವಾದಿಯು ಅರ್ಜಿಗೆ ಪೂರಕವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ದಾವಾ ಆಸ್ತಿಯು ವಾದಿಯ ಖುದ್ ಕಬ್ಜಾ ಭೋಗ್ವಟೆಯಲ್ಲಿರುವ ಸ್ಥಳವಾಗಿರುತ್ತದೆ. ಸದರಿ ದಾವಾ ಸ್ಥಳದ ದಕ್ಷಿಣ ದಿಕ್ಕಿನ ಲಗ್ತ ಪ್ರತಿವಾದಿಯರ ಸ್ಥಳವಿದ್ದು, ಇದರ ಗೈರು ಫಾಯ್ದೆ ಪಡೆದ ಪ್ರತಿವಾದಿಯರು ಸದರಿ ಸ್ಥಳದಲ್ಲಿರುವ ವಾದಿಗೆ ಸಂಬಂಧಪಟ್ಟ ನಿವೇಶನವನ್ನು ದುರಸ್ಥಿಪಡಿಸಿಕೊಳ್ಳಲು ಅಡ್ಡಿಪಡಿಸಿದ್ದು ಇರುತ್ತದೆ. ಒಂದಾನುವೇಳೆ, ಪ್ರತಿವಾದಿಯರು ಸದರಿ ನಿವೇಶನವನ್ನು ದುರಸ್ಥಿಪಡಿಸಿಕೊಳ್ಳುವಲ್ಲಿ ಅಡ್ಡಿ ಪಡಿಸಿದಲ್ಲಿ ವಾದಿಗೆ ಹೇರಳ ಲುಕ್ಸಾನು ಉಂಟಾಗುತ್ತದೆ. ಆದ್ದರಿಂದ, ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

**3.** ಸದರಿ ಅರ್ಜಿಗೆ ಪ್ರತಿವಾದಿಯರ-ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ, ಹೇಳುವುದೇನೆಂದರೆ, ವಾದಿಯು, ಕೇವಲ ಈ ಪ್ರತಿವಾದಿಯರನ್ನು ಸತಾಯಿಸುವ ದುರುದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಯು ದಾವಾ ಸ್ಥಳವನ್ನು ಈ ಪ್ರತಿವಾದಿಯರಿಂದ ಹಣ ಪಡೆದು ಪ್ರತಿವಾದಿಯರಿಗೆ ಬಿಟ್ಟುಕೊಟ್ಟ ನಂತರ, ಸದರಿ ಸ್ಥಳದಲ್ಲಿ 1991 ನೇ ಇಸವಿಯಲ್ಲಿ 1 ನೇ ಪ್ರತಿವಾದಿಯಳು ತನ್ನ ವಾಸ್ತವ್ಯದ ಮನೆ ನಿರ್ಮಿಸಿ 1991 ನೇ ಇಸವಿಯಿಂದಲೇ ಸದರಿ ಸ್ಥಳದಲ್ಲಿ ವಾಸ್ತವ್ಯ ಹೊಂದಿ ಬಂದಿದ್ದು ಇರುತ್ತದೆ. ವಾದಿಯ ಗಂಡನಿಗೆ ಸರ್ಕಾರದವರು ಪ್ಲಾಟ್ ನಂ.9 ನ್ನು ಮಂಜೂರು ಮಾಡುವಾಗ ಪ್ಲಾಟ್ ನಂ.9 ರಲ್ಲಿ ಉತ್ತರ ದಕ್ಷಿಣ 30 ಅಡಿ, ಪೂರ್ವ-ಪಶ್ಚಿಮವಾಗಿ 40 ಅಡಿ ಒಟ್ಟೂ 1200 ಚದರ ಮೀಟರ್ ಸ್ಥಳವನ್ನು ಮಂಜೂರು ಮಾಡಿರುತ್ತಿದ್ದು, ಸದರಿ ಸ್ಥಳವನ್ನೇ ವಾದಿಯಳ ಗಂಡನು

ಪ್ರತಿವಾದಿ ನಂ. 1 ನೇಯವಳಿಗೆ ನೀಡಿರುತ್ತಿದ್ದು, ಪ್ರತಿವಾದಿ ನಂ.1 ನೇಯವರು ಸದರಿ ಸ್ಥಳದಲ್ಲಿದ್ದ ಹಳೆ ಹಂಚಿನ ಮನೆಯನ್ನು ಮುರಿದು ಹೊಸದಾಗಿ ಆರ್.ಸಿ.ಸಿ., ಇಮಾರತನ್ನು ನಿರ್ಮಿಸಿ ವಾಸ್ತವ್ಯ ಮಾಡಿ ಬಂದಿದ್ದು ಇರುತ್ತದೆ. ಸದರಿ ಇಮಾರತ್ತಿಗೆ ಗ್ರಾಮ ಪಂಚಾಯತ ಹೆರೆಂಗಡಿಯವರು ರಶೀದಿ ನಮೂನೆ 3 ರಲ್ಲಿ ಆಸ್ತಿ ಸಂಖ್ಯೆ 152700402200400296 ಎಂದು ನೀಡಿದ್ದು ಇರುತ್ತದೆ.

**3(ಅ).** ಮುಂದುವರೆದು, 1 ನೇ ಪ್ರತಿವಾದಿಯಳು ವಾದಿಯಳ ಗಂಡನಿಗೆ ವಸತಿ ಯೋಜನೆಯಡಿ ಪಟ್ಟಾ ನೀಡಿದ ಸ್ಥಳದಲ್ಲಿಯೇ ಮನೆ ನಿರ್ಮಿಸಿ ಬಂದಿರುತ್ತಿದ್ದು, ಆ ಬಗ್ಗೆ ವಾದಿಯಳು ಯಾ ವಾದಿಯಳ ಕುಟುಂಬದವರು ಇಲ್ಲಿಯತನಕ ಏನೊಂದು ತಕರಾರು ಮಾಡಿದ್ದು ಇರುವುದಿಲ್ಲ. ಪ್ರತಿವಾದಿಯಳು ಸದರಿ ಸ್ಥಳದಲ್ಲಿ ಮನೆ ಹೊಂದಿ ಬಂದಿರುತ್ತಿದ್ದು, ಅದಕ್ಕೆ ಹೆರೆಂಗಡಿ ಗ್ರಾಮ ಪಂಚಾಯತದವರು ಮನೆ ನಂ. 81/1 ಅಂತಾ ಮನೆ ನಂಬರ ನೀಡಿದ್ದು ಇರುತ್ತದೆ ಹಾಗೂ ಸದರಿ ಮನೆಗೆ ತನ್ನ ಗಂಡನಾದ 2 ನೇ ಪ್ರತಿವಾದಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಕೂಡ ಪಡೆದಿದ್ದು ಇರುತ್ತದೆ. ದಾವಾ ಸ್ಥಳವು ನಿವೇಶನದ ಹಕ್ಕು ಯೋಜನೆಯಡಿಯಲ್ಲಿ ದಿನಾಂಕ: 19-11-1991 ರಂದು ವಾದಿಯ ಪತಿಯಾದ ಮೃತ ಧರ್ಮ ನಾರಾಯಣ ನಾಯ್ಕರವರ ಹೆಸರಿಗೆ ಪ್ರಾಪ್ತವಾದ ಆಸ್ತಿಯಾಗಿದ್ದಾಗಿಯೂ, ಸದ್ರಿ ಆಸ್ತಿಯನ್ನು ಮೃತ ಧರ್ಮ ನಾರಾಯಣ ನಾಯ್ಕ ಈತನು 1 ನೇ ಪ್ರತಿವಾದಿಗೆ ನೀಡಿದ್ದು ಇರುತ್ತದೆ. ಪ್ರತಿವಾದಿಯರು ಹೆರೆಂಗಡಿ ಗ್ರಾಮ ಪಂಚಾಯತ ಮನೆ ನಂ. 81 ನೇದನ್ನು ಮುರಿದು ಅದೇ ಸ್ಥಳದಲ್ಲಿ ವಾದಿಳ ಗಂಡನ ಪರವಾನಿಗೆ ಮೇರೆಗೆ 1991 ನೇ ಇಸವಿಯಲ್ಲಿಯೇ ಹೊಸದಾಗಿ ಮನೆ ಕಟ್ಟಿರುತ್ತಿದ್ದು, ಅದಕ್ಕೆ ಗ್ರಾಮ ಪಂಚಾಯತ ಹೆರೆಂಗಡಿಯವರು ಹೊಸದಾಗಿ ಮನೆ ನಂ. 81/1 ಎಂತ ನೀಡಿದ್ದು ಇರುತ್ತದೆ. ದಾವಾ ಸ್ಥಳ ಎಂಬುವುದು ಈಗ ಪ್ರತಿವಾದಿಯರು ವಾಸ್ತವ್ಯ ಮಾಡಿ ಕಬ್ಜಾ ಮಾಡಿ ಬಂದ ಸ್ಥಳವಾಗಿರುತ್ತದೆ. ಈ ವಾದಿಯರು ಮನೆ ನವೀಕರಣಕ್ಕಾಗಿ

ಯಾವುದೇ ಅರ್ಜಿಯನ್ನು ಹೆರೆಂಗಡಿ ಗ್ರಾಮ ಪಂಚಾಯತಕ್ಕೆ ಸಲ್ಲಿಸಿದ್ದು ಇರುವುದಿಲ್ಲ. ಆದ್ದರಿಂದ, ಈ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ದಾವೆಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಸದರಿ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯಕ್ಕೆ ಈ ಅರ್ಜಿಗಳ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**-:ಅಂಶಗಳು:-**

1. ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ವಾದಿಯು ತಂದಿರುತ್ತಾರೆಯೇ?
2. ದಾವೆಯಲ್ಲಿ ಅನುಕೂಲತೆಯ ಒಲವು ತಮ್ಮ ಪರ ಇದೆ ಎಂದು ವಾದಿಯು ರುಜುವಾತುಪಡಿಸುವರೇ?
3. ಅರ್ಜಿಯನ್ನು ಪುರಸ್ಕರಿಸದಿದ್ದರೇ ತಮಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ವಾದಿಯು ರುಜುವಾತುಪಡಿಸುವರೇ?
4. ಯಾವ ಆದೇಶ?

5. ಉಭಯ ಪಕ್ಷಗಾರರ ವಾದವನ್ನು ಆಲಿಸಿ, ದಾವೆಯಲ್ಲಿರುವ ದಾಖಲೆಗಳನ್ನು ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಲಾಗಿದೆ.

**ಅಂಶ ಸಂಖ್ಯೆ:-1. ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ:-2. ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ:-3. ಸಕಾರಾತ್ಮಕವಾಗಿ**
**ಅಂಶ ಸಂಖ್ಯೆ:-4. ಅಂತಿಮ ಆದೇಶದಂತೆ**

**ಈ ಕೆಳಕಂಡ ಕಾರಣಗಳಿಗಾಗಿ,**

******

-: **<u>ಕಾರಣಗಳು</u>** :-

6. **<u>ಅಂಶ ಸಂಖ್ಯೆ 1</u>** :- ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಪ್ರತಿವಾದಿ ಹಾಗೂ ಅವರ ಕಡೆಯವರು ದಾವಾ ಸ್ಥಳದಲ್ಲಿರುವ ವಾದಿಗೆ ಸಂಬಂಧಪಟ್ಟ ನಿವೇಶನವನ್ನು ದುರಸ್ಥಪಡಿಸಿಕೊಳ್ಳಲು ಅಡ್ಡಿಪಡಿಸಲು ಮುಂದಾಗಿರುತ್ತಾರೆ ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ, ವಾದಿಯ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ ನ್ಯಾಯಸಮ್ಮತವಾದ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ತಮ್ಮ ಪರವಾಗಿ ಹೊರಡಿಸಬೇಕು ಎಂದು ಕ್ಲೇಮನ್ನು ಮಾಡಿರುತ್ತಾರೆ.

7. ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತ ಕಾನೂನು ಬದ್ಧ ಹಕ್ಕುಗಳು ಮತ್ತು ಸದರಿ ಹಕ್ಕುಗಳನ್ನು ಸಂಬಂಧಿಸುವ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಾಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಭಂಧಕಾಜ್ಞೆ ಅರ್ಜಿಯನ್ನು ತೀರ್ಮಾನಿಸುವಾಗ, ನ್ಯಾಯಾಲಯವು ಸದರಿ ನಿರ್ಭಂಧಕಾಜ್ಞೆ ಆದೇಶವನ್ನು ನೀಡಿರುವುದರಿಂದ ಯಾವ ರೀತಿಯ ಪರಿಣಾಮಗಳು ಪಕ್ಷಗಾರರ ಮೇಲಿನ ಹಿತಾಸಕ್ತಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ ಎಂಬುದನ್ನು ಪರಿಗಣಿಸುವುದು ಅವಶ್ಯವಾಗಿರುತ್ತದೆ. ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತಹದ್ದಾಗಿರುವುದಿಲ್ಲ. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಬೇಕಾದರೆ ವಾದಿಯು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿರುವರೇ? ಅನುಕೂಲತೆಯ ಒಲವು ತನ್ನ ಪರವಾಗಿ ಇದೆಯೇ? ಮತ್ತು ಅರ್ಜಿಯನ್ನು ವಜಾಗೊಳಿಸುವುದರಿಂದ ತನಗೆ

ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ? ಎಂಬುದನ್ನು ನಿರೂಪಿಸಬೇಕಾಗಿರುತ್ತದೆ. ಪ್ರಸ್ತುತ ಅಂಶದಲ್ಲಿ ಈ ನ್ಯಾಯಾಲಯವು ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ. ಈ ಹಂತದಲ್ಲಿ ನ್ಯಾಯಾಲಯವು ದೀರ್ಘವಾದ ವಿಚಾರಣೆಯನ್ನು ಮಾಡುವುದು ನಿಷಿದ್ಧವಾಗಿದ್ದು ಪಕ್ಷಗಾರರ ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಗಳ ಮೇಲಿನ ಸ್ವಾಮ್ಯದ (ಒಡೆತನ) ಬಗ್ಗೆಯೇ ಚರ್ಚಿಸುವ ಹಾಗಿಲ್ಲ.

8. ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ನ್ಯಾಯಾಲಯವು ವಾದಿಯು ಸಲ್ಲಿಸಿರುವ ಅರ್ಜಿ ಮತ್ತು ಪ್ರಾರ್ಥಿಸಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ ಎಂಬುದನ್ನು ನಿರ್ಣಯಿಸಬೇಕಾಗಿರುತ್ತದೆ.

9. ವಾದಿಯು ಕೇವಲ ಆರೋಪಣೆಯನ್ನು ಮಾಡುವುದರಿಂದ ನ್ಯಾಯಾಲಯದಿಂದ ಆದೇಶವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಅದೇ ರೀತಿ ತಮ್ಮ ಆರೋಪಣೆಗೆ ಪೂರಕವಾದ ಮೇಲ್ನೋಟಕ್ಕೆ ಸಮ್ಮತವಾದ ಪುರಾವೆಗಳನ್ನು ಹಾಜರುಪಡಿಸಬೇಕಾಗಿರುತ್ತದೆ.

10. ಪ್ರಸ್ತುತ ಪ್ರಕರಣದಲ್ಲಿ ವಾದಿಯು ತನ್ನ ಕ್ಲೇಮಿನ ಸಮರ್ಥನೆಗಾಗಿ ಹಕ್ಕುಪತ್ರ, ಫೋಟೋಗಳು, ತೆರಿಗೆ ರಶೀದಿ ಮತ್ತು ಗ್ರಾಮ ಪಂಚಾಯಿತಿಯಿಂದ ಪಡೆದುಕೊಂಡ NOC ಹಾಗೂ ಅಡಮಾನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

11. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಮಾನ್ಯ ನ್ಯಾಯಾಲಯವು ಕೂಲಂಕೂಷವಾಗಿ ಪರಿಶೀಲಿಸಿದೆ. ಅವುಗಳೆಂದರೇ,

ಸದರಿ ಹಕ್ಕುಪತ್ರದಲ್ಲಿ ವಾದಿಯ ಗಂಡನಾದ ಮೃತ ಧರ್ಮ ನಾರಾಯಣ ನಾಯ್ಕರವರ ಹೆಸರು ಆಶ್ರಯ ಯೋಜನೆಯಡಿಯಲ್ಲಿ ನಿವೇಶನದ ಕುರಿತಾಗಿ ನಮೂದಾಗಿದ್ದು ಕಂಡು ಬರುತ್ತದೆ.

ವಾದಿಯು ಮನೆ ಸಂಖ್ಯೆ 81 ನ್ನು ಪುನರಚಿಸಲು ಹೆರೆಂಗಡಿ ಗ್ರಾಮ ಪಂಚಾಯತದಿಂದ ಅನುಮತಿಯನ್ನು ಪಡೆದುಕೊಂಡಿದ್ದು ಇರುತ್ತದೆ. ಸದರಿ ಹೆರೆಂಗಡಿ ಗ್ರಾಮ ಪಂಚಾಯತರವರು ಕೆಲವೊಂದಿಷ್ಟು ಷರತ್ತುಗಳನ್ನು ವಿಧಿಸಿ ಮನೆ ಸಂಖ್ಯೆ 81 ನ್ನು ಪುನರಚಿಸಲು ವಾದಿಗೆ ಅನುಮತಿಯನ್ನು ನೀಡಿರುತ್ತಾರೆ.

ವಾದಿಯು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಹೆರೆಂಗಡಿ ಗ್ರಾಮ ಪಂಚಾಯಿತಿಗೆ ತೆರಿಗೆಯನ್ನು ಪಾವತಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ಸದರಿ ಪಂಚಾಯತರವರು ದಿನಾಂಕ 19-12-2024 ರಂದು ತೆರಿಗೆ ರಶೀದಿಯನ್ನು ನೀಡಿರುತ್ತಾರೆ.

ವಾದಿಯು ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶದ ನಮೂನೆ-2 ರ ಜೇರಾಕ್ಸ ಪ್ರತಿಯನ್ನು ಹಾಜರಪಡಿಸಿದ್ದು, ಸದರಿ ದಾಖಲೆಯಲ್ಲಿ ಇಂದಿರಾ ಅವಾಸ ಯೋಜನೆ ಕಾರ್ಯಕ್ರಮದಡಿಯಲ್ಲಿ ಸಹಾಯಧನ ಪಡೆದವರು ಬರೆದುಕೊಡಬೇಕಾದ ಅಡಮಾನ ಪತ್ರದಲ್ಲಿ 1 & 2 ನೇ ಪ್ರತಿವಾದಿಯರ ಹೆಸರುಗಳು ನಮೂದಾಗಿದ್ದು ಕಂಡು ಬರುತ್ತದೆ..

**12.** ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಯರು ತಮ್ಮ ಕ್ಲೇಮಿನ ಸಮರ್ಥನೆಗಾಗಿ ಹೆರಂಗಡಿ ಗ್ರಾಮ ಪಂಚಾಯತದವರು ನೀಡಿದ ದೃಢೀಕೃತ ಪ್ರತಿ, ಪ್ರತಿವಾದಿಯರ ಆಧಾರಕಾರ್ಡಿನ ಪ್ರತಿ, ತೆರಿಗೆ ರಶೀದಿಯ ಪ್ರತಿ, ವಿದ್ಯುತ್ ಬಿಲ್, ಫೋಟೋ, ವಾಸಸ್ಥಳ ದೃಢೀಕರಣ ಪತ್ರ ಹಾಗೂ ಹೆಸ್ಕಾಂ ರವರು ನೀಡಿದ ದೃಢೀಕರಣ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಹಾಜರುಪಡಿಸಿರುತ್ತಾರೆ.

**13.** ಪ್ರತಿವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಮಾನ್ಯ ನ್ಯಾಯಾಲಯವು ಕೂಲಂಕೂಷವಾಗಿ ಪರಿಶೀಲಿಸಿದೆ.

2 ನೇ ಪ್ರತಿವಾದಿಯು ಸ್ವತ್ತು ಸಂಖ್ಯೆ 81/1 ಕ್ಕೆ ಸಂಬಂಧಪಟ್ಟಂತೆ ಹೆರೆಂಗಡಿ ಗ್ರಾಮ ಪಂಚಾಯಿತಿಗೆ ತೆರಿಗೆಯನ್ನು ಪಾವತಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ಸದರಿ ಪಂಚಾಯತರವರು ದಿನಾಂಕ 12-02-2024 ರಂದು ತೆರಿಗೆ ರಶೀದಿಯನ್ನು ನೀಡಿರುತ್ತಾರೆ.

ಪ್ರತಿವಾದಿಯರು ವಾದಿಗೆ ಸೇರಿದ ಹಾಗೂ ವಾದಿಗೆ ಪಟ್ಟಾ ನೀಡಿದ ಜನತಾ ಪ್ಲಾಟನ ಸ್ಥಳದಲ್ಲಿ ಮನೆಯನ್ನು ನಿರ್ಮಿಸಿಕೊಂಡಿರುವುದಾಗಿ ಹಾಗೂ ಸದರಿ ಮನೆಗೆ ಗ್ರಾಮ ಪಂಚಾಯತದಿಂದ ಮನೆ ಸಂಖ್ಯೆ 81/1 ಎಂದು ನಂಬರನ್ನು ನೀಡಿದ್ದು, ಮತ್ತು ಸದರಿ ಮನೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ ಎಂಬುದಾಗಿ ಹೆರೆಂಗಡಿ ಗ್ರಾಮ ಪಂಚಾಯತನವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ದಿನಾಂಕ 04-02-2008 ರಂದು ಮೇಲಿನ ಮೂಡ್ಕಣಿ ಗ್ರಾಮದ ಮನೆ ಸಂಖ್ಯೆ 81 ಕ್ಕೆ ಸಂಬಧಪಟ್ಟಂತೆ ವಾದಿಯು ತೆರಿಗೆಯನ್ನು ತುಂಬಿರುವುದು ಕಂಡು ಬರುತ್ತದೆ.

ದಿನಾಂಕ 24-01-2013 ರಂದು ಮೇಲಿನ ಮೂಡ್ಕಣಿ ಗ್ರಾಮದ ಮನೆ ಸಂಖ್ಯೆ 81/1 ಕ್ಕೆ ಸ ಸಂಬಧಪಟ್ಟಂತೆ 2 ನೇ ಪ್ರತಿವಾದಿಯು ತೆರಿಗೆಯನ್ನು ತುಂಬಿರುವುದು ಕಂಡು ಬರುತ್ತದೆ.

ಪ್ರತಿವಾದಿಯರು ತಾವು ವಾಸಿಸುತ್ತಿರುವ ಮನೆಗೆ ವಿದ್ಯುತನ್ನು ಪಡೆದುಕೊಂಡ ಬಗ್ಗೆ ದೃಢೀಕರಣ ಪತ್ರವನ್ನು ಮತ್ತು ವಿದ್ಯುತ ಬಿಲ್ ನ ರಶೀದಿಯಲ್ಲಿ 2 ನೇ ಪ್ರತಿವಾದಿಯು ಹಣವನ್ನು ಸಂದಾಯ ಮಾಡಿದ್ದು ಕಂಡು ಬರುತ್ತದೆ.

**14.** ಮಾನ್ಯ ನ್ಯಾಯಾಲಯವು ಈ ಹಂತದಲ್ಲಿ ಈ ಕೆಳಗಿನ ನಿರ್ಣಿತ ತೀರ್ಪನ್ನು ಅವಲಂಬಿಸಿರುತ್ತದೆ.

5. **Maruti and others V/s Govind and others,** reported in **2023(1) KCCR 167,** wherein Hon'ble High Court of Karnataka held that,

> **"CIVIL PROCEDURE CODE, 1908**-order 39, Rules 1 & 2- Permanent Injunction-Plaintiffs/Appellants proving their possession over suit property Prima facie through revenue records-Possession or prior peaceful settled possession is itself evidence of title-Appellants merely seeking an injunctive relief with regard to their possession-Held, what is being protected is the possession of plaintiffs in the interregnum till the defendants establishes their title and take recourse in accordance with law to recover the possession.".

ವಾದಿಯ ಪರ ವಕೀಲರ ವಾದವೇನೆಂದರೆ, ವಾದಿಯ ಗಂಡನ ಹೆಸರು ದಾವಾ ಸ್ಥಳದ ಕಂದಾಯ ದಾಖಲೆಗಳಲ್ಲಿ ನಮೂದಾಗಿದ್ದು ಇರುತ್ತದೆ. ಆದ್ದರಿಂದ ವಾದಿಯು ಮೇಲ್ನೋಟಕ್ಕೆ ಸಾಬೀತುಪಡಿಸುವಂತಹ ಮೊಕದ್ದಮೆಯನ್ನು ನ್ಯಾಯಾಲಯದ ಮುಂದೆ ಈ ಹಂತದಲ್ಲಿ ತೋರ್ಪಡಿಸಿದ್ದು, ವಾದಿಯ ಪರವಾಗಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

**15.** ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ, ವಾದಿಯು ಕಟ್ಟಡ ಸಂಖ್ಯೆ 81 ಕ್ಕೆ ಸಂಬಂಧಪಟ್ಟಂತೆ ತಮ್ಮ ದಾವೆಯನ್ನು ಹೂಡಿರುತ್ತಾರೆ ಹಾಗೂ ಪ್ರತಿವಾದಿಯರು ಕಟ್ಟಡ ಸಂಖ್ಯೆ 81/1 ಕ್ಕೆ ಸಂಬಂಧಪಟ್ಟಂತೆ ತಮ್ಮ ಕ್ಲೇಮನ್ನು ಮಾಡುತ್ತಿದ್ದಾರೆ. ಈ ಹಂತದಲ್ಲಿ ದಾವಾ ಸ್ಥಳಕ್ಕೆ ಸಂಬಂಧಪಟ್ಟ ಕಂದಾಯ ದಾಖಲೆಗಳಲ್ಲಿ ವಾದಿಯ ಗಂಡನ ಹೆಸರು ನಮೂದಾಗಿರುವುದು ಹಾಗೂ ಸದರಿ ಮನೆಯ ತೆರಿಗೆಯನ್ನು ವಾದಿಯು ಪಾವತಿಸಿರುವುದು ಕಂಡು ಬಂದಿರುವುದರಿಂದ, ವಾದಿಯು

ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತಂದಿರುತ್ತಾರೆ ಎಂಬ ಅಭಿಪ್ರಾಯಕ್ಕೆ ಬಂದು ಈ ನ್ಯಾಯಾಲಯವು **ಅಂಶ ಸಂಖ್ಯೆ 1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ**.

16. **ಅಂಶ ಸಂಖ್ಯೆ 2 & 3** :- ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆದುಕೊಳ್ಳಲು ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಯ 2 & 3 ನೇ ನಿಯಮಗಳು ತಮ್ಮ ಪರವಾಗಿದೆ ಎಂದು ನಿರೂಪಿಸುವುದು ಅವಶ್ಯವಿರುತ್ತದೆ.

17. ಪ್ರತಿವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯು ಸ್ವಚ್ಚ ಮನಸ್ಸಿನಿಂದ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ವಾದಿಯು ಆರೋಪಣೆಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಈ ದಾವೆಯನ್ನು ಸಲ್ಲಿಸಲು ಊಹೆ ಮಾಡಿಕೊಂಡಿರುವ ಸಂಗತಿಗಳಾಗಿರುತ್ತವೆ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

18. ಉಭಯಪಕ್ಷಗಾರರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿದ ನಂತರ, ನ್ಯಾಯಾಲಯವು ಪ್ರಸ್ತುತ ಅರ್ಜಿಯನ್ನು ತೀರ್ಮಾನಿಸುವ ಕಾರಣಕ್ಕಾಗಿ, ಪಕ್ಷಗಾರರು ಮಧ್ಯಂತರ ಅರ್ಜಿಯ ಮೇಲೆ ಸಲ್ಲಿಸಿರುವ ವಾದಾಂಶಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದ ನಂತರ ಕಂಡುಬರುವುದೇನೆಂದರೇ, ಈಗಾಗಲೇ ಮಾನ್ಯ ನ್ಯಾಯಾಲಯವು ಅಂಶ ಸಂಖ್ಯೆ-1 ರಲ್ಲಿ ವಿವರವಾಗಿ ಚರ್ಚಿಸಿದಂತೆ ವಾದಿಯೇ ತೆರಿಗೆಯನ್ನು ಪಾವತಿಸಿ ದಾವಾ ಸ್ಥಳದ ಸ್ವಾಧೀನಾನುಭವದಲ್ಲಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಆದ್ದರಿಂದ, ಸದರಿ ಮನೆಯನ್ನು ನವೀಕರಣ ಮಾಡಿ ಅದರಲ್ಲಿ ವಾದಿಯು ವಾಸ ಮಾಡುವುದರಿಂದ ಪ್ರತಿವಾದಿಯರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿರುತ್ತದೆ. ಅದಾಗ್ಯೂ, ಕಟ್ಟಡ ಸಂಖ್ಯೆ 81 ಹಾಗೂ ಕಟ್ಟಡ ಸಂಖ್ಯೆ 81/1 ಗೆ ಸಂಬಂಧಪಟ್ಟಂತೆ ಈ ಎರಡೂ ಕಟ್ಟಡಗಳ ಬಗ್ಗೆ

ಸಂಪೂರ್ಣವಾದ ವಿವರಣೆಯನ್ನು ಪಡೆಯಲು ಈ ದಾವೆಯ ಸಂಪೂರ್ಣ ವಿಚಾರಣೆ ನಡೆಯುವುದು ಅವಶ್ಯವಿದೆ ಎಂಬ ಅಭಿಪ್ರಾಯಕ್ಕೆ ಮಾನ್ಯ ನ್ಯಾಯಾಲಯವು ಬಂದಿರುತ್ತದೆ. ಆದ್ದರಿಂದ, ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡಿದ್ದೇ ಆದಲ್ಲಿ, ಅದರಿಂದ ಪ್ರತಿವಾದಿಯರಿಗೆ ಹೆಚ್ಚಿನ ಕೇಡು, ಶ್ರಮ ಮತ್ತು ಅನಾನುಕೂಲತೆಯಾಗುವುದಿಲ್ಲವೆಂದು ಅಭಿಪ್ರಾಯಪಡುತ್ತದೆ ಹಾಗೂ ಒಂದು ವೇಳೆ ಪ್ರತಿವಾದಿಯರ ವಿರುದ್ಧ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ವಾದಿಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಉಂಟಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದು **ಅಂಶ ಸಂಖ್ಯೆ 2 & 3 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ.**

ಈ ಮೇಲಿನ ಅಂಶಗಳನ್ನು ಮಧ್ಯಂತರ ಅರ್ಜಿ ಸಂಖ್ಯೆ 3 ರ ಕುರಿತಾಗಿ ಮಾತ್ರ ಚರ್ಚೆ ಮಾಡಲಾಗಿರುತ್ತದೆ.

19. **ಅಂಶ ಸಂಖ್ಯೆ 4** :- ಈ ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

## ಆ ದೇ ಶ

ವಾದಿಯು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಪುರಸ್ಕರಿಸಲಾಗಿದೆ.

ಈ ದಾವೆಯು ಅಂತಿಮವಾಗಿ ಇತ್ಯರ್ಥವಾಗುವವರೆಗೂ ಪ್ರತಿವಾದಿಯರು ಅಥವಾ ಅವರ ಕಡೆಯವರು ದಾವಾ ಸ್ಥಳದಲ್ಲಿರುವ ವಾದಿಗೆ ಸಂಬಂಧಪಟ್ಟ ನಿವೇಶನವನ್ನು ದುರಸ್ಥಿಪಡಿಸಿಕೊಳ್ಳಲು ಅಡ್ಡಿಪಡಿಸದಂತೆ ಹಾಗೂ ವಾದಿಯ ಕಬ್ಜಾ ಭೋಗ್ವಟೆಗೆ ಆತಂಕಪಡಿಸದಂತೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಮೇಲ್ಕಂಡ ಆದೇಶವನ್ನು ನಾನು ನೇರವಾಗಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿ ಆ ನಂತರ ತಪ್ಪುಗಳನ್ನು ಸರಿಪಡಿಸಿ, ನಂತರ ನನ್ನ ಸಹಿಯೊಂದಿಗೆ ಈ ದಿನ ಅಂದರೆ **5 ನೇ ಜುಲೈ** 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಸಹಿ ಇದೆ.

**(ಈರಣ್ಣ ಹುಣಶಿಕಟ್ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಹೊನ್ನಾವರ.**

*****